ಶ್ರೀ ಆರ್. ವೆಂಕಟರಾಮಯ್ಯ.— ಚಲನಚಿತ್ರ ರಂಗದಲ್ಲಿ ಒಳ್ಳೆಯ ಚಲನಚಿತ್ರಗಳು ಬರುತ್ತಿಲ್ಲ ಎಂಬ ಕಂಪ್ಲೇಂಟ್ ಬಂದಿದೆಯೇ ಎಂದು ಕೇಳಿದ್ದೆ. ಈ ನಡುವೆ ೩-೪ ವರ್ಷಗಳಿಂದ ಹೆಚ್ಚು ಸಹಾಯ ಧನ ಕೊಡುತ್ತಿದ್ದೀರಿ. ಉತ್ತಮ ಗುಣ ಮಟ್ಟದ ಚಿತ್ರಗಳು ಹೆಚ್ಚು ಬರುವುದಕ್ಕೆ ಕ್ರಮಬದ್ಧ ಮಾಡುವಂತಹ ಪ್ರೋಗ್ರಾಮ್ ಏನಾದರೂ ಇದೆಯೇ ?

ಶ್ರೀ ಎಂ. ಪಿ. ಪ್ರಕಾಶ್.— ಸುಮಾರು ೧೦ ವರ್ಷದಿಂದ ಸಹಾಯ ಧನವನ್ನು ಕೊಡುತ್ತಿದ್ದೇವೆ. ಕೆಲವು ಕನ್ನಡ ಚಲನಚಿತ್ರಗಳು ರಾಷ್ಟ್ರ ಮಟ್ಟದಲ್ಲಿ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದಿವೆ. ಕನ್ನಡ ಚಲನ ಚಿತ್ರಕ್ಕೆ ಪ್ರೋತ್ಸಾಹ ಕೊಡಬೇಕೆಂಬ ಕಾರಣಕ್ಕಾಗಿ ಎಷ್ಟೂವರೆ ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ. ಮತ್ತ ಕಲಾತ್ಮಕ ಚಲನಚಿತ್ರಗಳಿಗೆ ೩ ಲಕ್ಷ ರೂಪಾಯಿ ಸಹಾಯ ಧನ ಕೊಡುತ್ತೇವೆ. ಚಲನಚಿತ್ರಗಳಿಗೆ ಹೆಚ್ಚು ಸಹಾಯ ಧನ ಕೊಡುತ್ತೇವೆಂದು ಘೋಷಣೆ ಮಾಡಿದ ತಕ್ಷಣ ಒಳ್ಳೆಯ ಚಲನಚಿತ್ರಗಳು ಬರುತ್ತಾ ಇಲ್ಲ ಎನ್ನುವ ಮಾತನ್ನು ಅವರು ಹೇಳಿದ್ದಾರೆ. ಸಹಾಯ ಧನ ಕೊಟ್ಟ ಮಾತ್ರಕ್ಕೆ ಗುಣಮಟ್ಟ ಹೆಚ್ಚಬೇಕು ಎಂದು ಅಲ್ಲ. ಸಮಾಜದಲ್ಲಿ ಜನರ ಅಭಿರುಚಿಗೆ ತಕ್ಕಂಥ ಚಲನಚಿತ್ರಗಳು ಬರುತ್ತಿವೆ. ಎಲ್ಲವೂ ಕೆಟ್ಟ ಚಿತ್ರಗಳು, ಒಳ್ಳೆಯ ಚಲನ ಚಿತ್ರಗಳು ಬರುತ್ತಲೇ ಇಲ್ಲ ಎನ್ನುವುದು ಸರಿಯಲ್ಲ. 'ಕಾಡಿನ ಬೆಂಕಿ'ಗೆ ಈ ವರ್ಷ ಅತ್ಯುತ್ತಮ ಪ್ರಶಸ್ತಿ ಸಿಕ್ಕಿದೆ. 'ತಬರನ ಕಥೆ' ಚಿತ್ರಕ್ಕೆ 'ಕಮಲ ಪ್ರಶಸ್ತಿ' ಸಿಕ್ಕಿದೆ. ನಮ್ಮ ಗಿರೀಶ್ ಕಾಸರವಳ್ಳಿ ಸತ್ಯಜಿತ್‌ರಾಯ್ ನಂತರ ಹಿನೇ ಬಾರಿಗೆ ಅತ್ಯುತ್ತಮ ರಾಷ್ಟ್ರ ಪ್ರಶಸ್ತಿ ಪಡೆದ ಕನ್ನಡಿಗರು. ಸಾರಾಸಗಟಾಗಿ ಎಲ್ಲ ಕನ್ನಡ ಚಲನಚಿತ್ರಗಳು ಕಳಪೆ ಎಂದು ಹೇಳುವುದು ಸರಿಯಲ್ಲ, ಒಳ್ಳೆಯ ಕನ್ನಡ ಚಲನಚಿತ್ರಗಳೂ ಬರುತ್ತಿವೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಸುಸಜ್ಜಿತವಾದಂಥ ಸ್ಟುಡಿಯೋ ಒಂದನ್ನು ಸ್ಥಾಪನೆ ಮಾಡುತ್ತೀರಾ ಎಂದು ಕೇಳಿದ್ದೆ. ಅದಕ್ಕೆ ತಾವು ಉತ್ತರ ಕೊಡಲಿಲ್ಲ ?

ಶ್ರೀ ಎಂ.ಪಿ. ಪ್ರಕಾಶ್.—ಮಾನ್ಯ ಸದಸ್ಯರು ಸ್ಟುಡಿಯೋ ಬಗ್ಗೆ ನೇರವಾಗಿ ಪ್ರಶ್ನೆ ಕೇಳಿಲ್ಲ. ಆದರೂ ಇವರ ಬಗ್ಗೆ ಉತ್ತರ ಕೊಡಬೇಕೆಂದರೆ, ಈಗ ನಮ್ಮಲ್ಲಿ ಕಂಠೀರವ ಸ್ಟುಡಿಯೋ ಇದೆ. ಅದು ಎಲ್ಲ ರೀತಿಯಿಂದ ಸುಸಜ್ಜಿತವಾದಂಥ ಸ್ಟುಡಿಯೋ ಆಗಿದೆ. ಆದ್ದರಿಂದ ಅಲ್ಲಿ ಯಾರುಬೇಕಾದರೂ ತಮಗೆ ಬೇಕಾದಂಥ ಉಪಕರಣಗಳನ್ನು ಪಡೆಯಬಹುದು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರಿಗೆ ಸಿನಿಮಾ ಟಾಕೀಸ್ ಮತ್ತು ಸಿನಿಮಾ ಟೆಂಟ್‌ಗಳು ಇವೆ. ಆದ್ದರಿಂದ ಅವರಿಗೆ ಉಪಪ್ರಶ್ನೆ ಕೇಳಲು ಅವಕಾಶ ಮಾಡಿಕೊಡಿ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಮಂತ್ರಿಗಳು ನನ್ನ ಆಸ್ತಿಯ ಬಗ್ಗೆ ಹೇಳುತ್ತಿದ್ದಾರೆ. ಆದರೆ ಅವರ ಆಸ್ತಿ ಎಷ್ಟಿದೆ ಎಂಬುದು ನನಗೆ ಗೊತ್ತಿದೆ. ಅವರ ಆಸ್ತಿಯಲ್ಲಿ ಐವತ್ತನೇ ಒಂದು ಭಾಗದಷ್ಟು ಸಹ ನನಗೆ ಇಲ್ಲ.

ಪಕ್ಕೆ ಸಂಸ್ಥೆಗಳ ದುರಸ್ತಿ ಮತ್ತು ನಿರ್ವಹಣೆ

೨೫೮. ಶ್ರೀ ಟಿ. ಎಸ್. ಪಣಿ (ಕೆ ಜಿ.ಎಫ್.),—ಮಾನ್ಯ ಗ್ರಾಮಾಣ ಅಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಕ್ಕೆ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪಕ್ಕೆ ಮಂಡಳಿಯಿಂದ ರಾಜ್ಯದ ವಿಭಿನ್ನ ನಗರಗಳಲ್ಲಿರುವ ಮಸೀದಿಗಳ ದುರಸ್ತಿ ಮತ್ತು ನಿರ್ವಹಣೆಗಾಗಿ ಕೊಡಲಾಗಿರುವ ಹಣವೆಷ್ಟು (ನಗರವಾರು ವಿವರಗಳನ್ನು ನೀಡುವುದು) :

ಆ) ಕೆ ಜಿ ಎಫ್. ನಗರಕ್ಕೆ ಇಂತಹ ಯಾವುದೇ ನೆರವು ಕೊಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಇ) ಕೆ. ಜಿ. ಎಫ್. ನಗರದಲ್ಲಿರುವ ಮಸೀದಿಗಳಿಗೆ ಹಣ ಸಹಾಯ ನೀಡುತ್ತಿದೆಯೇ; ಹಾಗಿದ್ದಲ್ಲಿ ಯಾವಾಗ ?

ಶ್ರೀ ಮಹಮದ್ ಮೊಯ್ನುದ್ದೀನ್ (ಗ್ರಾಮೀಣ ಅಭಿವೃದ್ಧಿ, ಪಂಚಾಯತ್‌ರಾಜ್ ಮತ್ತು ವಕ್ಫ್ ಮತ್ತು ಪಶುಸಂಗೋಪನಾ ಮಂತ್ರಿಗಳ ಪರವಾಗಿ).—

ಅ) ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಮತ್ತು ಇ) ಜುಮ್ಮಾ ಮಸೀದಿ, ಮಳಯಾಲಿಲೈನ್, ಉರ್ಗಂ, ಕೆ.ಜಿ.ಎಫ್., ಮತ್ತು ಜಾಮಿಯಾ ಮಸೀದಿ, ಸುನ್ನಿ, ರಾಬರ್ಟ್‌ಸನ್‌ಪೇಟೆ, ಕೆ.ಜಿ.ಎಫ್. ಇವುಗಳಿಗೆ ಅನುಕ್ರಮವಾಗಿ ೧೦,೦೦೦ ಮತ್ತು ೫,೦೦೦ ರೂ.ಗಳ ಅನುಧಾನ ನೀಡಲಾಗಿದೆ.

ನಗರಗಳಲ್ಲಿ ವಕ್ಫ್ ಸಂಸ್ಥೆಗಳಿಗೆ ಮಂಜೂರಾದ ಧನ ಸಹಾಯದ ಪಟ್ಟಿ
(ಜಿಲ್ಲಾ ಕೇಂದ್ರ ಸ್ಥಾನಗಳು).

ಕ್ರಮ ಸಂಖ್ಯೆ	ಜಿಲ್ಲೆ		ಸಂಸ್ಥೆ	ಮಂಜೂರಾದ ಹಣ
೧	ಬೆಳಗಾವಿ		ಇಲ್ಲ	ಇಲ್ಲ
೨	ಬಿಜಾಪುರ	೧	ಮದೀನಾ ಮಸೀದಿ, ಬಿಜಾಪುರ	೧೦,೦೦೦.೦೦
೩	ಧಾರವಾಡ	೧	ಮಸೀದಿ ಶಾಥಾಜಾರ್ ಮೊಹದೆಲೆ ಮೊಹಲ್ಲಾ ಜಮಾತ್ ಬಂಕಾಪುರ ಧಾರವಾಡ	೫,೦೦೦.೦೦
		೨	ಮಾದರ್‌ಮಡ್ಡಿ ಮಸೀದಿ, ಧಾರವಾಡ	೫,೦೦೦.೦೦
		೩	ಜುಮ್ಮಾ ಮಸೀದಿ ರೋಡ್, ಧಾರವಾಡ	೧೦,೦೦೦.೦೦
೪	ಮಂಡ್ಯ	೧	ನೂರನಿ ಮಸೀದಿ, ದಾಳಹಳ್ಳಿ ಬಡಾವಣೆ, ಮಂಡ್ಯ	೧೦,೦೦೦.೦೦
೫	ಹಾಸನ	೧	ಮಸೀದಿ ಕೆ.ಆರ್. ಪುರಂ, ಹಾಸನ	೧೦,೦೦೦.೦೦
		೨	ಜಾಮಿಯಾ ಮಸೀದಿ ಹಾಸನ ಸಿಟಿ	೧೦,೦೦೦.೦೦
		೩	ಬಾರ್‌ಲೈನ್ ಮಸೀದಿ, ಹಾಸನ ಸಿಟಿ	೫,೦೦೦.೦೦
೬	ಚಿಕ್ಕಮಗಳೂರು	೧	ಸಂಗೀನ್ ಮಸೀದಿ, ಚಿಕ್ಕಮಗಳೂರು	೧೦,೦೦೦.೦೦
೭	ದಕ್ಷಿಣ ಕನ್ನಡ	೧	ಜುಮ್ಮಾ ಮಸೀದಿ, ಮಂಗಳೂರು	೧೦,೦೦೦.೦೦
		೨	ಜಂಮ್ಮಾ ಮಸೀದಿ, ಡೇರಕ್ಟಟ, ಮಂಗಳೂರು ತಾಲ್ಲೂಕು	೧೦,೦೦೦.೦೦
೮	ಬೆಂಗಳೂರು	೧	ಮಸೀದಿ ಮೈನ್ ರೋಡ್, ಯುಲಹಂಕ ಟೌನ್	೧೦,೦೦೦.೦೦
		೨	ಮಸೀದಿ, ಕಚ್ಚರಕನಹಳ್ಳಿ, ವೆಂಕಟೇಶಪುರಂ, ಬೆಂಗಳೂರು	೧೦,೦೦೦.೦೦
		೩	ಮಸೀದಿ-ಇ-ಗುಂತುರೂಪ, ಗೌತಮಪುರಂ, ಅಲ್ಸೂರ್, ಬೆಂಗಳೂರು	೧೦,೦೦೦.೦೦
		೪	ಉಮ್ಮರ್ ಫರೂಕ್-ಇ-ಮಸೀದಿ, ಶೋಲೆ, ಅಶೋಕನಗರ, ಬೆಂಗಳೂರು	೧೦,೦೦೦.೦೦
		೫	ಸುನ್ನಿ ಮಸೀದಿ, ಆರಬ್‌ಲೈನ್, ರಿಚ್‌ಮಂಡ್ ರೋಡ್, ಬೆಂಗಳೂರು	೧೦,೦೦೦.೦೦
		೬	ಮಸೀದಿ-ಇ-ಅಮ್ಮರ್, ೬ನೇ ಬ್ಲಾಕ್, ಜಯನಗರ, ಬೆಂಗಳೂರು	೧೦,೦೦೦.೦೦
		೭	ಜಾವಿಯಾ ಮಸೀದಿ, ಗೋರಿಪಾಳ್ಯ, ಬೆಂಗಳೂರು	೫,೦೦೦.೦೦
		೮	ಅಲಸೂರು ಮಸೀದಿ, ಅಲಸೂರು, ಬೆಂಗಳೂರು	೧೦,೦೦೦.೦೦

೧	೨	೩	೪
೯	ತುಮಕೂರು	ಇಲ್ಲ	
೧೦	ಕೋಲಾರ	೧ ಜಮ್ಮಾ ಮಸೀದಿ, ಮಳಯಾಲಿ ಲೇನ್ ಓರುಗಂ, ಕೆ.ಜಿ.ಎಫ್.	೧೦,೦೦೦.೦೦
		೨ ಜಾಮಿಯಾ ಮಸೀದಿ, ಸನ್ನಿ, ರಾಬರ್ಟಸನ್ ಪೇಟೆ, ಕೆ.ಜಿ.ಎಫ್.	೫,೦೦೦.೦೦
೧೧	ಚಿತ್ರದುರ್ಗ	೧ ಜಾಮಿಯಾ ಮಸೀದಿ, ಚಿಕ್ಕಪೇಟೆ, ಚಿತ್ರದುರ್ಗ	೫,೦೦೦.೦೦
೧೨	ಶಿವಮೊಗ್ಗ	೧ ಬಾರ್‌ಲೈನ್ ಮಸೀದಿ, ಶಿವಮೊಗ್ಗ ಸಿಟಿ	೧೦,೦೦೦.೦೦
೧೩	ಬೀದರ್	೧ ಮಸೀದಿ-ಇ-ಅಜಾವರ್, ಬೆಹಮನಿ ರೋಡ್, ಗೋಲಕಾನ, ಬೀದರ್	೧೦,೦೦೦.೦೦
೧೪	ಗುಲ್ಬರ್ಗಾ	ಇಲ್ಲ	ಇಲ್ಲ
೧೫	ರಾಯಚೂರು	೧ ಇಕ್ ಮಿನರ್ ಮಸೀದಿ, ಬೆರೂನ್ ಜಿಲ್ಲಾ ರಾಯಚೂರು	೧೦,೦೦೦.೦೦
		೨ ಮಸೀದಿ-ಇ-ಮಿರ್ ಹಸನ್, ಅಂಡರೂನ್ ಕ್ಯಿಲ್ಲಾ ರಾಯಚೂರು	೫,೦೦೦.೦೦
		೩ ಮಸೀದಿ-ಇ-ಖಾದರ್ ಗುಂಡ್, ರಾಯಚೂರು	೧೦,೦೦೦.೦೦
		೪ ಮಸೀದಿ, ಪರ್ಕೋಟಿ, ಪಟ್ಟಲಬಾರ್ಗ, ರಾಯಚೂರು	೧೦,೦೦೦.೦೦
		೫ ಮಸೀದಿ ಮಾರಗ್ ದರವಾಜಾ, ಬೆರೂನ್ ಖಿಲ್ಲಾ, ರಾಯಚೂರು	೧೦,೦೦೦.೦೦
		೬ ಮಸೀದಿ ಖಾನ್ ಚೌಲಿ ಅಮ	೧೦,೦೦೦.೦೦
		೭ ಮಸೀದಿ-ಇ-ಉರೂಬ್-ಆಗಬ್, ಅರಬ್ ಮೊಹಲ್ಲಾ, ರಾಯಚೂರು	೫,೦೦೦.೦೦
		೮ ಮಂಜಿದ್-ಇ-ಗಂಗ್ಗಾಲ್‌ಬಾಯಿ, ಅಂದರೂನ್ ಖಿಲ್ಲಾ ರಾಯಚೂರು	೫,೦೦೦.೦೦
೧೬	ಬಳ್ಳಾರಿ	೧ ದಾಲವಾಲ ಮಸೀದಿ, ಕೌಲ್ ಬಜಾರ್, ಬಳ್ಳಾರಿ	೫,೦೦೦.೦೦

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಮಂತ್ರಿಗಳು ಉತ್ತರದಲ್ಲಿ ಹತ್ತು ಸಾವಿರ ಮತ್ತು ೫ ಸಾವಿರ ರೂಪಾಯಿಗಳ ಅನುದಾನವನ್ನು ಈ ಸಂಬಂಧದಲ್ಲಿ ನೀಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಇದು ಬಹಳ ಕಡಿಮೆ ಆಯಿತು. ರಾಬರ್ಟ್‌ಸನ್ ಪೇಟೆಯಲ್ಲಿರುವ ಮಸೀದಿ ಬಹಳ ದೊಡ್ಡದು. ಅಲ್ಲಿಗ ಸುಮಾರು ೫೦ ಸಾವಿರ ಮುಸ್ಲೀಮರು ಹೋಗಿ ಬರುತ್ತಾರೆ. ಈ ಮುಸ್ಲೀಮರು ಬಹಳ ಬಡವರಾದ ಕಾರಣ ಕೆ.ಜಿ.ಎಫ್. ಮತ್ತು ರಾಬರ್ಟ್‌ಸನ್ ಪೇಟೆಯಲ್ಲಿರುವ ಮಸೀದಿಗಳ ದುರಸ್ತಿಗಾಗಿ ಹೆಚ್ಚು ಹಣ ಸಹಾಯವನ್ನು ನೀಡುತ್ತೀರಾ ?

ಶ್ರೀ ಮೊಹಮ್ಮದ್ ಮೊಹಿಉದ್ದೀನ್.—ಮಾನ್ಯ ಅಧ್ಯಕ್ಷರೇ, ಈಗ ಕೊಟ್ಟಿರುವ ಹತ್ತು ಸಾವಿರ ಮತ್ತು ೫ ಸಾವಿರ ರೂಪಾಯಿಗಳನ್ನೇ ಅವರು ಇನ್ನೂ ಉಪಯೋಗ ಮಾಡಿಕೊಂಡಿಲ್ಲ. ದಿನಾಂಕ ೧೪-೩-೧೯೬೮ರಲ್ಲಿ ಬಿಡುಗಡೆ ಮಾಡಿರುವ ಈ ಹಣವನ್ನು ಅವರು ಉಪಯೋಗ ಮಾಡಿಕೊಳ್ಳಬೇಕಾದರೆ ಅವರು ಕೆಲವೊಂದು ಮಾಹಿತಿಗಳನ್ನು ಕೊಡಬೇಕಾಗುತ್ತದೆ. ಅಂದರೆ ಪ್ಲಾನ್, ಎಸ್ಟಿಮೇಟ್ ಹಾಗೂ

ಯುಟಿಲೈಜೇಷನ್ ಸರ್ಟಿಫಿಕೇಟ್ ಮುಂತಾದನ್ನು ಕೊಡಬೇಕಾಗುತ್ತದೆ. ಈಗ ಬಿಡುಗಡೆ ಮಾಡಿರುವ ಹಣವನ್ನು ಅವರು ಉಪಯೋಗಿಸಿಕೊಂಡ ಮೇಲೆ ಮುಂತ್ತಿ ಹಣ ಕೊಡುವ ವಿಚಾರವನ್ನು ಪರಿಶೀಲನೆ ಮಾಡಲಾಗುತ್ತದೆ.

ಪ್ರಶ್ನೆ ೨೬೫೫ (ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಶ್ನೆ ೨೬೯೦ (ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಶ್ನೆ ೨೬೦೭ (ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಶ್ನೆ ೨೬೫೪.

ಅಧ್ಯಕ್ಷರು.—ಇದಕ್ಕೆ ಸಮಯ ಬೇಕೆಂದು ಕೇಳಿದ್ದಾರೆ.

ಶ್ರೀ ಕೆ.ಬಿ. ಶಾನಪ್ಪ.—ಇದು ಎರಡನೇ ಸಲ ಈ ರೀತಿ ಆಗಿರುವುದು. ಇದಕ್ಕೆ ಎರಡು ಲೈನ್‌ಗಳ ಉತ್ತರ ಕೊಡಬಹುದಾಗಿತ್ತು.

ಅಧ್ಯಕ್ಷರು.—ಅವರು ಸಮಯ ಕೇಳಿದ್ದಾರೆ. ಉತ್ತರ ಬಂದಮೇಲೆ ಅದನ್ನು ತಮ್ಮ ಊರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಕೆ.ಬಿ. ಶಾನಪ್ಪ.—ಹಾಗಿದ್ದರೆ ನಾನು ಪ್ರಶ್ನೆ ಏತಕ್ಕೆ ಕೇಳಬೇಕಾಗಿತ್ತು ?

ಅಧ್ಯಕ್ಷರು.—ಅವರು ಸಮಯ ಕೇಳಿದ್ದಾರೆ. ನಾನು ನಿಮ್ಮ ರಕ್ಷಣೆಗೆ ಬರುತ್ತೇನೆ. ಉತ್ತರ ಬಂದಕೂಡಲೇ ತಮಗೆ ಕಳುಹಿಸಿಕೊಡುತ್ತೇನೆ.

ಧಾರವಾಡ ಜಿಲ್ಲೆಯಲ್ಲಿ ಸಿಹಿ ನೀರಿನ ಕೊರತೆ

೨೬೯೦. ಶ್ರೀ ಎಂ.ಕೆ. ಕಂಲಕರ್ಣಿ (ನವಲಗುಂದ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯಂತ ರಾಜ್ ಮತ್ತು ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆ ನವಲಗುಂದ ಹಾಗೂ ನರಗುಂದ ತಾಲ್ಲೂಕುಗಳಲ್ಲಿ ಕುಡಿಯುವ ಸಿಹಿ ನೀರಿನ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ತುರ್ತು ಕೈಗೊಂಡ ಸ್ವರೂಪದ ಕ್ರಮಗಳೇನು ?

ಇ) ಕುಡಿಯುವ ನೀರಿನ ಕೆರೆಗಳ ಹೂಳನ್ನು ಪ್ರತಿ ವರ್ಷ ತೆಗೆಸುವ ಕ್ರಮವೇನಾದರೂ ಸರ್ಕಾರಕ್ಕೆ ಇದೆಯೆ ?

ಶ್ರೀ ಆರ್.ವಿ. ದೇಶಪಾಂಡೆ (ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ).—

ಅ) ಬಂದಿದೆ.

ಆ) ಕೊರತೆ ಇರುವ ಎಲ್ಲಾ ಗ್ರಾಮಗಳಿಗೂ ಕುಡಿಯುವ ಸಿಹಿ ನೀರು ಒದಗಿಸಲು ಟೆಕ್ನಾಲಜಿ ಮಿಷನ್ ಕಾರ್ಯಕ್ರಮದಡಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಇಲ್ಲ.

ಶ್ರೀ ಎಂ.ಕೆ. ಕಂಲಕರ್ಣಿ.—ಇಲ್ಲಿ ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ''ಇಲ್ಲ'' ಎಂದು ಹೇಳಿದ್ದಾರೆ ನವಲ್ಮ ಭಾಗದಲ್ಲಿ ಕುಡಿಯುವ ಸಿಹಿ ನೀರನ್ನು ಒದಗಿಸಲು ಟೆಕ್ನಾಲಜಿ ಮಿಷನ್ ಕಾರ್ಯಕ್ರಮದಡಿಯಲ್ಲಿ ಕ್ರಮ ತೆಗೆದುಕೊಂಡರೆ ಏನೂ ಉಪಯೋಗವಾಗುವುದಿಲ್ಲ. ಆದ್ದರಿಂದ ಕೆರೆಗಳ ಹೂಳನ್ನು ತೆಗೆಸಲು ಪ್ರತಿವರ್ಷವೂ ಬಜೆಟ್‌ನಲ್ಲಿ ಹಣ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ.—ಕುಡಿಯುವ ನೀರಿನ ಸಲುವಾಗಿ ಕೆರೆಗಳಲ್ಲಿರುವ ಹೂಳನ್ನು ಪ್ರತಿ ವರ್ಷ ತೆಗೆಸುವ ಕಾರ್ಯಕ್ರಮ ನಮ್ಮ ಇಲಾಖೆ ಮುಂದೆ ಇಲ್ಲ. ಇವೊತ್ತು ನವಲಗುಂದ ಮತ್ತು ನರಗುಂದ ಈ ಎರಡು ತಾಲ್ಲೂಕ್‌ಗಳಲ್ಲಿ ಮತ್ತು ಕೆಲವು ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ.